ಪ್ರಕಟಣೆ

» ಉದ್ಘಾಟನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ) ಆಯೋಜನೆ. 'ಮಾಹಿತಿ ಹಕ್ಕು ಕಾಯಿದೆ-2005' ತರಬೇತಿ ಕಾರ್ಯಕ್ರಮ. ಉದ್ಘಾಟನೆ: ವಿವಿ ಕುಲಪತಿ ಡಾ.ಎಸ್.ವಿ. ಸುರೇಶ. ಮುಖ್ಯ ಅತಿಥಿಗಳು: ಕೆವಿಐಸಿ ಉಪಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಆರ್.ಎಸ್. ಪಾಂಡೆ (ಬೆಂಗಳೂರು ವಿಭಾಗ), ಎಲ್. ಮದನ್ ಕುಮಾರ್ ರೆಡ್ಡಿ (ಮುಂಬೈ ವಿಭಾಗ), ಕೆವಿಐಸಿ ಉಪನಿರ್ದೇಶಕ, ನೋಡಲ್ ಅಧಿಕಾರಿ (ಮುಂಬೈ) ಕೃಷ್ಣ ಪಾಲ್, ವಿವಿಯ ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್. ಮಧುಪ್ರಸಾದ್. **ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣ, ಜಿಕೆವಿಕೆ. ಬೆಳಗ್ಗೆ 10ಕ್ಕೆ.**

24-08-2023
Vijayavani Pg 04

24-08-2023
Udayavani Pg 04

■ ಬೆಂಗಳೂರು ಕೃಷಿ ವಿವಿ: ಮಾಹಿತಿ ಹಕ್ಕು ಕಾಯಿದೆ ಕುರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆ. ಮುಖ್ಯ ಅತಿಥಿಗಳು: ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್, ಉಪಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್.ಎಸ್. ಪಾಂಡೆ, ಎಲ್. ಮದನ್ ಕುಮಾರ್ ರೆಡ್ಡಿ, ಕೃಷ್ಣ ಪಾಲ್. ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ. ಬೆಳಗ್ಗೆ 10ಕ್ಕೆ.

NCBS to sign MoUs for better research

EXPRESS NEWS SERVICE
@ Bengaluru

THE National Centre for Biological Sciences (NCBS), Bengaluru, will sign Memorandums of Understanding (MoUs) on Thursday, 24 August 2023, with Research & Training Organizations of Ministry of Environment, Forests & Climate Change (MoEFCC), Indian Council of Forestry and Research and Education (ICFRE), Indira Gandhi National Forest Academy (IGFNA), Central Academy for State Forestry Service (CASFOS), Institute of Forest Genetics and Tree Breeding (IFGTB) and Forest Survey of India (FSI), as a step towards building partnership for research and education on biodiversity and conservation.

This joint venture will aid in Indian Forest Service (IFS) probation and mid-career officers, and their internship at NCBS-TIFR and its partner institutes; short-term training programs, workshops and conferences, and joint supervision of Master of Science projects for joint PhD students.

The partnerships will include faculty exchange programmes and joint courses on conservation genetics and restoration biology.

24-08-2023
Ind Exp Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

24-08-2023
Prajavani Pg 10


ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶ

ಸಕ್ಕರೆ ರಫ್ತು ನಿಷೇಧ ಸಾಧ್ಯತೆ

ಮುಂಬೈ/ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಅಕ್ಟೋಬರ್‌ನಿಂದ ಸಕ್ಕರೆ ರಫ್ತಿನ ಮೇಲೆ ನಿಷೇಧ ಹೇರುವ ಸಾಧ್ಯತೆ ಇದೆ. ಮಳೆಯ ಕೊರತೆಯ ಕಾರಣದಿಂದಾಗಿ ಕಬ್ಬು ಬೆಳೆ ಕಡಿಮೆ ಆಗಿರುವ ಕಾರಣ ಈ ತೀರ್ಮಾನ ಕೈಗೊಳ್ಳಬಹುದು ಎಂದು ಸರ್ಕಾರದ ಮೂಲಗಳು ಹೇಳಿವೆ.

ಅಕ್ಟೋಬರ್‌ನಿಂದ ಹೊಸ ಸಕ್ಕರೆ ಹಂಗಾಮು ಆರಂಭವಾಗುತ್ತದೆ. ಹೊಸ ಹಂಗಾಮಿಗೆ ಅನ್ವಯವಾಗುವಂತೆ ಸಕ್ಕರೆ ರಫ್ತು ನಿಷೇಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಭಾರತವು ಸಕ್ಕರೆ ರಫ್ತು ನಿಷೇಧಿಸಿದರೆ, ಜಾಗತಿಕ ಮಾರುಕಟ್ಟೆಯಲ್ಲಿ ಆಹಾರ ವಸ್ತುಗಳ ಹಣದುಬ್ಬರ ಹೆಚ್ಚಾಗುವ ಆತಂಕ ಇದೆ. ಏಳು ವರ್ಷಗಳಿಂದ ಈಚೆಗೆ ಸಕ್ಕರೆ ರಫ್ತು ನಿಷೇಧಿಸಿದ ನಿದರ್ಶನ ಇಲ್ಲ.

'ದೇಶಿ ಸಕ್ಕರೆ ಬೇಡಿಕೆಯನ್ನು ಪೂರೈಸುವುದು ನಮ್ಮ ಪ್ರಾಥಮಿಕ ಆದ್ಯತೆ. ಹೆಚ್ಚುವರಿ ಕಬ್ಬಿನಿಂದ ಎಥೆನಾಲ್ ಉತ್ಪಾದಿಸುವ ಗುರಿಯೂ ಇದೆ' ಎಂದು ಸರ್ಕಾರದ ಮೂಲವೊಂದು ಹೇಳಿದೆ. 'ಮುಂಬರುವ ಹಂಗಾಮಿನಲ್ಲಿ ರಫ್ತು ಮಾಡುವುದಕ್ಕೆ ಹೆಚ್ಚುವರಿ ಸಕ್ಕರೆ ನಮ್ಮಲ್ಲಿ ಅಗತ್ಯ ಪ್ರಮಾಣದಲ್ಲಿ ಇರುವುದಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳುವ ಪ್ರಸಕ್ತ ಹಂಗಾಮಿನಲ್ಲಿ 61 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ರಫ್ತು ಮಾಡಲು ಕೇಂದ್ರವು ಅವಕಾಶ ಕಲ್ಪಿಸಿದೆ. ಹಿಂದಿನ ಹಂಗಾಮಿನಲ್ಲಿ 1.11 ಕೋಟಿ ಟನ್ ರಫ್ತಿಗೆ ಅವಕಾಶ ನೀಡಲಾಗಿತ್ತು.

ಮುಖ್ಯಾಂಶಗಳು

- ಅಕ್ಕಿ ನಂತರ ಸಕ್ಕರೆ ರಫ್ತು ನಿಷೇಧ ಸಾಧ್ಯತೆ
- ಮಳೆ ಕೊರತೆಯಿಂದಾಗಿ ಸಕ್ಕರೆ ಉತ್ಪಾದನೆಗೆ ಧಕ್ಕೆ
- ಕರ್ನಾಟಕ, ಮಹಾರಾಷ್ಟ್ರದಲ್ಲಿ ಕಬ್ಬು ಬೆಳೆ ಅಧಿಕ

ಮಹಾರಾಷ್ಟ್ರ ಮತ್ತು ಕರ್ನಾಟಕ ಕಬ್ಬು ಬೆಳೆಯುವುದರಲ್ಲಿ ದೇಶದಲ್ಲಿ ಮುಂಚೂಣಿಯಲ್ಲಿ ಇವೆ. ಆದರೆ ಈ ರಾಜ್ಯಗಳಲ್ಲಿ ಮಳೆಯ ಪ್ರಮಾಣವು ವಾಡಿಕೆಗಿಂತ ಶೇಕಡ 50ರಷ್ಟು ಕಡಿಮೆ ಇದೆ. ಈ ರಾಜ್ಯಗಳು ದೇಶದ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಶೇ 50ಕ್ಕಿಂತ ಹೆಚ್ಚಿನ ಪಾಲು ಹೊಂದಿವೆ.


ಮಳೆ ಕಡಿಮೆ ಆಗಿರುವ ಕಾರಣ ಅಕ್ಟೋಬರ್ 1ರಿಂದ ಶುರುವಾಗುವ ಹೊಸ ಹಂಗಾಮಿನಲ್ಲಿ ಸಕ್ಕರೆ ಉತ್ಪಾದನೆ ತಗ್ಗಬಹುದು. ಅಲ್ಲದೆ, 2024-25ರ ಹಂಗಾಮಿನಲ್ಲಿ ಕಬ್ಬು ಬೆಳೆಯುವ ಪ್ರಮಾಣ ಕೂಡ ಕಡಿಮೆ ಆಗಬಹುದು ಎಂದು ಉದ್ಯಮದ ಮೂಲಗಳು ಹೇಳಿವೆ.

ದೇಶದಲ್ಲಿ ಸಕ್ಕರೆ ಬೆಲೆಯು ಈ ವಾರದಲ್ಲಿ ಏರಿಕೆ ಕಂಡಿದೆ. 'ಸಕ್ಕರೆಯ ಬೆಲೆಯಲ್ಲಿ ಈಚೆಗೆ ಆಗಿರುವ ಏರಿಕೆಯು, ರಫ್ತಿಗೆ ಅವಕಾಶ ನೀಡುವ ಸಾಧ್ಯತೆಯನ್ನು ಇಲ್ಲವಾಗಿಸಿದೆ' ಎಂದು ಇನ್ನೊಬ್ಬರು ಅಧಿಕಾರಿ ತಿಳಿಸಿದ್ದಾರೆ. 2023-24ನೆಯ ಹಂಗಾಮಿನಲ್ಲಿ ದೇಶದ ಸಕ್ಕರೆ ಉತ್ಪಾದನೆಯು ಶೇ 3.3ರಷ್ಟು ಕಡಿಮೆ ಆಗುವ ಸಾಧ್ಯತೆ ಇದೆ.

ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತಿಗೆ ಕೇಂದ್ರವು ಈಗಾಗಲೇ ನಿಷೇಧ ಹೇರಿದೆ. ಈರುಳ್ಳಿ ರಫ್ತಿನ ಮೇಲೆ ಶೇ 40ರಷ್ಟು ಸುಂಕ ವಿಧಿಸಲಾಗಿದೆ.

ಬೀಜ್ ಬಂಧನ್ ಅಭಿಯಾನ

ಬೆಂಗಳೂರು: ಈ ವರ್ಷದ ರಕ್ಷಾ ಬಂಧನ ಆಚರಣೆಗೆ ಸೃಜನಾತ್ಮಕ ಮತ್ತು ಪರಿಸರ ಸ್ನೇಹಿಯಾಗಿ ಆಚರಿಸುವ ನಿಟ್ಟಿನಲ್ಲಿ, ಈಸ್ಟ್-ವೆಸ್ಟ್ ಸೀಡ್ ಇಂಡಿಯಾ ವಿನೂತನವಾಗಿ ಹೈಬ್ರಿಡ್ ಬೀಜಗಳಿಂದ ತಯಾರಿಸಲ್ಪಟ್ಟ ರಾಖಿಗಳನ್ನು ಒಳಗೊಂಡಿರುವ, ಬೀಜ್ ಬಂಧನ್ ಅಭಿಯಾನವನ್ನು ಪರಿಚಯಿಸುತ್ತಿದೆ. ಈಸ್ಟ್-ವೆಸ್ಟ್ ಸೀಡ್ ಇಂಡಿಯಾದ ಸುಂದರವಾದ ಗಿಫ್ಟ್ ಹ್ಯಾಂಪರ್ ಕಲ್ಲಂಗಡಿ ಆಕಾರದ ಜೈವಿಕ ರಾಖಿಯನ್ನು ಒಳಗೊಂಡಿದೆ, ಇದು ತೋಟಗಾರಿಕೆ ಕಿಟ್, ಕೋಕೋಪೀಟ್ ಡಿಸ್ಕ್, ಮತ್ತು ವೈಯಕ್ತಿಕ ಸಂದೇಶವನ್ನು ಒಳಗೊಂಡಿದೆ. ಬೀಜ ಬಂಧನ ಅಭಿಯಾನವು ರಾಖಿಗಿಂತಲೂ ಹೆಚ್ಚಾಗಿದ್ದು ಪರಿಸರ ಸ್ನೇಹಿ ಮತ್ತು ಸುಸ್ಥಿರ ಜೀವನಕ್ಕಾಗಿ ನಮ್ಮೆಲ್ಲರ ಕಾಳಜಿಯ ಸಂಕೇತವಾಗಿದೆ. ಹೇಗೆ ರಾಖಿ ಹಬ್ಬವು ಒಡಹುಟ್ಟಿದವರ ನಡುವಿನ ಪ್ರೀತಿಯ ಬಾಂಧವ್ಯವನ್ನು ಪ್ರತಿನಿಧಿಸುತ್ತದೆಯೋ ಹಾಗೆಯೆ ಕಲ್ಲಂಗಡಿ ಬೀಜಗಳನ್ನು ಒಳಗೊಂಡಿರುವ ನಮ್ಮ ಬೀಜ ಬಂಧನ-ರಾಖಿ ಈಸ್ಟ್ ವೆಸ್ಟ್ ಸೀಡ್ ಸಂಸ್ಥೆಯ ಸುಸ್ಥಿರತೆಯ ಧ್ಯೇಯವಾಗಿದೆ.



24-08-2023
Hosagiganta Pg 12

ಲವಲವಿಕ GARDEN ಲೋಕ

ಸಾಲು ಹಬ್ಬಗಳಿಗೆ ಸೇವಂತಿಗೆ ಹೂ

ಈಗಾಗಲೇ ಶ್ರಾವಣ ಮಾಸ ಪ್ರಾರಂಭವಾಗಿದ್ದು, ಇನ್ನು ಹಬ್ಬಹರಿದಿನಗಳು ಸಾಲು ಸಾಲಾಗಿ ಶುರುವಾಗುತ್ತವೆ. ವಿವಿಧ ಜಾತಿಯ ಬಣ್ಣಬಣ್ಣದ ಹೂಗಳು ಹಬ್ಬದ ಸಂಭ್ರಮವನ್ನು ಹೆಚ್ಚಿಸುತ್ತವೆ. ಪೂಜೆಗೆ ಮಾತ್ರವಲ್ಲದೇ ಅಲಂಕಾರದಲ್ಲೂ ಹೆಚ್ಚು ಬೇಡಿಕೆ ಸೃಷ್ಟಿಸಿಕೊಂಡಿರುವ ಈ ಹೂವನ್ನು ಮನೆಯ ಅಂಗಳದಲ್ಲಿ ಅಥವಾ ಕುಂಡಗಳಲ್ಲಿ ಸುಲಭವಾಗಿ ಬೆಳೆಯಬಹುದು. ಈ ಬೆಳೆಯ ಬೆಳವಣಿಗೆಗೆ ಹಗಲು ದೊಡ್ಡದಾಗಿರುವ ದಿನಗಳು ಹಾಗೂ ಹೂ ಬಿಡಲು ರಾತ್ರಿ ದೊಡ್ಡದಿರುವ ದಿನಗಳು ಅತ್ಯವಶ್ಯಕ. ನಾಟಿ ಮಾಡಲು ಮೃದು ಕಾಂಡದ ತುಂಡುಗಳು ಹಾಗೂ ಕಂದುಗಳನ್ನು ಬಳಸಬಹುದು. ನಾಟಿಯಾದ 30 ದಿನಗಳ ನಂತರ ಗಿಡಗಳ ತುದಿ ಭಾಗವನ್ನು (2-3 ಸೆಂ.ಮೀ.) ಚಿವುಟಬೇಕು. ಇದರಿಂದ ಹಲವು ಕವಲುಗಳೊಡೆದು ಹೆಚ್ಚು ರೆಂಬೆಗಳು ಬೆಳೆಯುತ್ತವೆ. ಹಾಗೆಯೇ, ಈ ಕವಲುಗಳು ಅಥವಾ ರೆಂಬೆಗಳನ್ನು ಮತ್ತೆ ಚಿವುಟುವುದರಿಂದ ಹೆಚ್ಚಿನ ರೆಂಬೆಗಳನ್ನು ಪಡೆದು ಪ್ರತಿಗಿಡಕ್ಕೆ ಹೂಗಳ ಸಂಖ್ಯೆ ಹೆಚ್ಚಾಗಿ ಇಳುವರಿಯೂ ಸಹ ಹೆಚ್ಚಾಗುತ್ತದೆ. ಈ ಬೆಳೆಯಲ್ಲಿ ಕೀಟಗಳ ಸಮಸ್ಯೆ ಹಾಗೂ ರೋಗ ಕಂಡುಬಂದಾಗ ಅವುಗಳ ತೀವ್ರತೆಗನುಗುಣವಾಗಿ ಸಾವಯವ ಮತ್ತು ರಸಾಯನಿಕ ಔಷಧಗಳನ್ನು ಸಿಂಪಡಿಸಬೇಕು.



ಡಾ. ಎಂ. ಶಾಲಿನಿ
ಸಹಾಯಕ ಪ್ರಾಧ್ಯಾಪಕರು(ತೋಟಗಾರಿಕೆ)
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

24-08-2023
V-karnataka Pg 04

Pomegranate growers burn midnight oil to keep thieves at bay

Ranganath K | TNN

Chikkaballapur: Pomegranate growers in several villages of Chikkaballapur district are losing their midnight sleep, literally, to ensure they are not deprived of enjoying the fruits of their labour. Armed with clubs, chilly powder and even machetes, bands of farmers and their wives are maintaining round-the-clock vigil of their farms to safeguard their crop from thieves.

There is high demand for pomegranate, priced between Rs 120-Rs 200 per kg, depending on size. Farmers are worried by increasing instances of thefts over the last week.

Tomato growers had to maintain similar vigil in their farms after prices hit the roof in Chikkaballapur and neighbouring Kolar district.

Chandan Gowda of Muthukadahalli in Chikkaballapur, who has grown pomegranate crop in two acres of land and is expecting a yield of 15 metric tonnes, said he had plans to harvest the fruit but some miscreants stole nearly one MT of the crop from his farm last week.

Chandan Gowda said there have been at least five theft cases resulting in the loss of over two MT of crops in his village. Farm owners have formed groups and are keeping guard on a shift basis. While the first shift keeps vigil between 9pm and 1am, the second one takes charge after that.

In the morning, women members of families keep vigil and alert their menfolk if they spot any unfamiliar faces in the vicinity. Police officials have been informed of the theft cases with a request to provide security in farms. Gowda said it is quite easy for miscreants to steal the fruits as they can pluck nearly 100kg in just 10 minutes.



Nearly 500kg of the fruit has been stolen from the farm of Devaraj (in pic) in Muthukadahalli of Chikkaballapur dist

Nearly 40 farmers have grown pomegranate in 200 acres at Muthukadahalli village, and a few at Nayanahalli and neighbouring villages. Traders from Andhra Pradesh arrive at farms and purchase the crop on-site, Gowda added.

Manjunatha Reddy of Gownipalli near Srinivasapur in Kolar district, who has grown the fruit in eight acres, said he is expecting about 80 MT of yield and plans to export them to Bangladesh.

24-08-2023
Times of Ind Pg 04

Centre Asks Apex Court to Withdraw its November Order against GM Mustard

Concerns Still Weigh

Last year, a moratorium was sought on the commercial release of GM mustard after it was cleared by the government

SC had then asked the parties to maintain status quo on its cultivation

It sought a status report from the government on GM mustard production



GOVT'S STAND

A post-release monitoring committee did not report any non-compliance of stipulated conditions on the environmental release of GM mustard hybrid, DMH-11

Indu.Bhan@timesgroup.com

New Delhi: The government on Tuesday asked the Supreme Court to vacate its November order that restrained environmental release of genetically modified (GM) mustard, saying "the huge policy implications involved deserve early resolution" of the matter as the growing season is fast approaching in September and October. A bench led by Justices BV Nagarathna asked the petitioners, including Gene Campaign and a group of activists led by Aruna Rodrigues, to file their objections to the Centre's application seeking discharge of its statements made to the court.

The government said the assurance given by its counsel that the process would not be taken forward was not intended to halt the entire process of research and testing. The petitioners had last year sought a moratorium on the commercial release of GM mustard after it was cleared in October by the government.

24-08-2023
Eco Times Pg 09